# ಚಿಕ್ಕದೇವರಾಜ ಒಡೆಯರ್ - ಸು.1673-1704.

**14ನೆ ಅರಸರು**

# ಆರಂಭಿಕ ಜೀವನ ಮತ್ತು ಪಟ್ಟಾಭಿಷೇಕ

- ಮೈಸೂರಿನ ಪ್ರಸಿದ್ಧ ದೊರೆಗಳಲ್ಲೊಬ್ಬರು.
- ಕರ್ಣಾಟಕ ಚಕ್ರವರ್ತಿ ಅಪ್ರತಿಮವೀರ, ತೆಂಕಣರಾಜ ಎಂಬ ಬಿರುದುಗಳನ್ನು ಧರಿಸಿದ್ಧ ಇವರು ಪರಾಕ್ರಮಶಾಲಿ, ವ್ಯವಹಾರ ಚತುರ, ಒಳ್ಳೆಯ ಆಡಳಿತಗಾರ, ದೂರದರ್ಶಿಯಾದ ರಾಜಕಾರಣಿ, ಸಾಹಿತ್ಯಪ್ರೇಮಿ ಮತ್ತು ಸ್ವತಃ ಕವಿಗಳು.
- ದೊಡ್ಡದೇವರಾಜ ಒಡೆಯರ ಸೋದರರ ಪುತ್ರರು.
- ಜನನ: 1645.
- ಪಟ್ಟಾಭಿಷೇಕ: 1673ರಲ್ಲಿ ತಮ್ಮ 28ನೆಯ ವಯಸ್ಸಿನಲ್ಲಿ.
- ಔರಂಗಜೇಬ ಮತ್ತು  ಶಿವಾಜಿಯ ಸಮಕಾಲೀನರು.

# ಪಟ್ಟಕ್ಕೆ ಬಂದಾಗ ಇದ್ದ ಪರಿಸ್ಥಿತಿ

- ಆಡಳಿತ ಕಾಲದಲ್ಲಿ ದಕ್ಷಿಣ ಭಾರತದ ರಾಜಕೀಯ ಸನ್ನಿವೇಶ ಜಟಿಲಮಯ.
- ಮೈಸೂರು ಅರಸರ ಸ್ಥಾನ ಅಭದ್ರ.
- ಪಾಳೆಯಗಾರರ ಪಿತೂರಿ,  ಕರ್ಣಾಟಕಕ್ಕೆ ಕಂಟಕಪ್ರಾಯರಾಗಿದ್ದ ದಕ್ಷಿಣದ ಮುಸ್ಲಿಂ ಅರಸರು, ಇವರ ವೈರದ ಜೊತೆಗೆ ಮರಾಠರ ದಾಳಿಗಳು
- ಇವೆಲ್ಲವನ್ನೂ ಎದುರಿಸಿ ಕನ್ನಡ ರಾಜ್ಯವನ್ನು ಕಟ್ಟುವ ಧ್ಯೇಯ ಹೊಂದಿ, ಯಶಸ್ವಿಯಾದ ಕೀರ್ತಿ ಚಿಕ್ಕದೇವರಾಜರದು.

# ಸೈನಿಕ ಸಾಧನೆಗಳು

- ಪಟ್ಟಕ್ಕೆ ಬಂದ ತರುಣದಲ್ಲೇ ಮೈಸೂರು ರಾಜ್ಯವನ್ನು ಕಬಳಿಸುವ ಯತ್ನದಲ್ಲಿದ್ದ ಮಧುರೆಯ ನಾಯಕ ಚೊಕ್ಕನಾಥನ ದಾಳಿಯನ್ನು ಎದುರಿಸಿ ಜಯಗಳಿಸಿದರು.
- **1674**ರಲ್ಲಿ ಕೆಳದಿಯ ಅರಸನ ಸೊಲ್ಲಡಗಿಸಿದರು.
- **1675** ರಲ್ಲಿ ವಿಜಾಪುರದ ದಂಡನಾಯಕನಾದ ರಣದುಲ್ಲಾಖಾನನನ್ನು ಸೋಲಿಸಿ, ಕೇತಸಮುದ್ರ, ಕಂಡಿಕೆರೆ, ಹಂಡಾಲಕೆರೆ, ಗೂಳೂರು, ತುಮಕೂರು ಮತ್ತು ಹೊನ್ನಾವಳ್ಳಿ ಪ್ರಾಂತ್ಯಗಳನ್ನು ವಶಪಡಿಸಿಕೊಂಡು ರಾಜ್ಯ ವಿಸ್ತಾರಮಾಡಿದ್ದು ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ತ್ವದ ಘಟನೆ. ಇದರಿಂದ ದಕ್ಷಿಣದಲ್ಲಿ ಮುಸ್ಲಿಮರ ಪ್ರಭಾವ ಸಡಿಲವಾಗತೊಡಗಿತು.

# ಮರಾಠರ ದಾಳಿಗಳ ನಿಗ್ರಹ

- **1677 ರಲ್ಲಿ ರಾಜ್ಯಕ್ಕೆ ಬಂದೊದಗಿದ್ದ ಮರಾಠರ ವಿಪತ್ತನ್ನು ಇವರು ನಿವಾರಿಸಿದರು.**
- **ಮತ್ತೆ 1682ರಲ್ಲಿ ದಾಳಿ ನಡೆಸಿದ ಮರಾಠರ ದಾಳಿಯನ್ನು ಎದುರಿಸಿ ಯಶಸ್ವಿಯಾದರು.**
- **ಎರಡು ಬಾರಿ ಸೋತ ಮರಾಠರು ಮರಳಿ  ಚಿಕ್ಕದೇವರಾಜರನ್ನು ಎದುರಿಸುವ ಸನ್ನಾಹ ಮಾಡಲಿಲ್ಲ.**
- **ಹೀಗೆ ರಾಜ್ಯಕ್ಕೆ ಬಂದೊದಗಿದ ವಿಷಮ ಸನ್ನಿವೇಶವನ್ನು ಧೈರ್ಯದಿಂದ ಎದುರಿಸಿ ಮೈಸೂರು ರಾಜ್ಯದ ಭವ್ಯ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿದರು.**

# ಬೆಂಗಳೂರಿನ ಖರೀದಿ

- **1687** ರಲ್ಲಿ ಮೊಗಲರ ಸೇನಾನಿ ಖಾಸಿಮ್‌ಖಾನನಿಂದ ಖರೀದಿಸಿದ ಬೆಂಗಳೂರು ಮೈಸೂರು ರಾಜ್ಯಕ್ಕೆ ತಿಲಕಪ್ರಾಯವಾಯಿತು.

# ಔರಂಗಜೇಬನೊಂದಿಗೆ ಸ್ನೇಹ

- ಪ್ರಾರಂಭದ ಸಮಸ್ಯೆಗಳನ್ನು ಎದುರಿಸಿದ ನಂತರ ರಾಜ್ಯವನ್ನು ಸುಭದ್ರಗೊಳಿಸುವತ್ತ ಗಮನ ಹರಿಸಲಾಯಿತು.
- ಅವರು ಅಹಮದ್‌ನಗರದಲ್ಲಿದ್ದ ಔರಂಗ್‌ಜೇಬನಲ್ಲಿಗೆ ಲಿಂಗಪ್ಪಯ್ಯನ ನೇತೃತ್ತ್ವದಲ್ಲಿ ರಾಯಭಾರವೊಂದನ್ನು ಕಳುಹಿಸಿದರು.
- ಚಿಕ್ಕದೇವರಾಜರ ಪ್ರಭುತ್ವಕ್ಕೆ ಔರಂಗಜೇಬ್ ಮನ್ನಣೆ ನೀಡಿದನಲ್ಲದೆ ಅವರಿಗೆ ಜಗದೇವರಾಯ ಎಂಬ ಬಿರುದನ್ನಿತ್ತ. ಔರಂಗಜೇಬನಿಗೂ ಈ ಮೈತ್ರಿಯಿಂದ ಪ್ರತಿಫಲ ದೊರಕಿತು.
- ರಾಯಭಾರದ ಉದ್ದೇಶಗಳನ್ನು ಊಹಿಸಬಲ್ಲಿರಾ?

# ರಾಯಭಾರದ ಉದ್ದೇಶಗಳು

- ಪ್ರಬಲವಾಗಿದ್ದ ಮರಾಠರ ಶಕ್ತಿಯನ್ನು ಕುಗ್ಗಿಸಬೇಕಾದರೆ, ದಕ್ಷಿಣದ ಮುಸಲ್ಮಾನರು ದಾಳಿ ಮಾಡದಂತೆ ತಪ್ಪಿಸಬೇಕಾದರೆ, ಮೊಗಲರ ಚಕ್ರವರ್ತಿ ಔರಂಗಜೇಬನ ಸ್ನೇಹಸಂಬಂಧ ಅನಿವಾರ್ಯವಾಗಿತ್ತು
- ಪಾಳೆಯಗಾರರ ದಾಳಿಗಳಿಂದ ರಾಜ್ಯವನ್ನು ರಕ್ಷಿಸುವುದು, ಅಲ್ಲದೆ ಚಿಕ್ಕದೇವರಾಜರ ಸ್ನೇಹಿತನಾದ ಮೊಗಲ್ ದಳಪತಿ ಖಾಸಿಮ್‌ಖಾನನ ಮರಣದ ಅನಂತರ ಮೊಗಲರಿಂದ ಒದಗಬಹುದಾಗಿದ್ದ ವಿಪತ್ತಿನಿಂದ ಮೈಸೂರನ್ನು ರಕ್ಷಿಸುವುದು, ಮೈಸೂರು ರಾಜ್ಯದ ಪ್ರತಿಷ್ಠೆಯನ್ನು ಹೆಚ್ಚಿಸುವುದು-ಇವು ರಾಯಭಾರದ ಉದ್ದೇಶಗಳಾಗಿದ್ದವು.

# ಮೊಗಲರಿಗೆ ಉಂಟಾದ ಲಾಭವೇನು?

- ಮುಖ್ಯವಾಗಿ ಮರಾಠರನ್ನು ದಕ್ಷಿಣದಲ್ಲಿ ಎದುರಿಸಿ, ಅವರ ಪ್ರಾಬಲ್ಯವನ್ನು ಕುಂಠಿತಗೊಳಿಸುವ ಔರಂಗಜೇಬನ ಯತ್ನದಲ್ಲಿ ಚಿಕ್ಕದೇವರಾಜರು ಸಹಾಯ ನೀಡಿದರು.

# ರಾಜ್ಯದ ವಿಸ್ತಾರ

- ಅನಂತರ ಚಿಕ್ಕದೇವರಾಜರು ಕುಮಾರಯ್ಯನ ನೇತೃತ್ವದಲ್ಲಿ ದಕ್ಷಿಣಕ್ಕೆ ಕಳಿಸಿದ ಸೈನ್ಯ ದೀರ್ಘಕಾಲ ಮುತ್ತಿಗೆ ಹಾಕಿ ತಿರುಚಿನಾಪಳ್ಳಿಯನ್ನು ವಶಪಡಿಸಿಕೊಂಡಿತು.
- ಇವರ ಆಡಳಿತಕಾಲದಲ್ಲಿ ಮೈಸೂರು ರಾಜ್ಯ ಉತ್ತರದಲ್ಲಿ ಚಿಕ್ಕಮಗಳೂರು ಮತ್ತು ತುಮಕೂರು ಜಿಲ್ಲೆಗಳಿಂದ ದಕ್ಷಿಣದಲ್ಲಿ ಅಣ್ಣಾಮಲೈ ಮತ್ತು ಪಳನಿ ಬೆಟ್ಟಗಳವರೆಗೂ ಪೂರ್ವದಲ್ಲಿ ಸೇಲಂನಿಂದ ಪಶ್ಚಿಮದಲ್ಲಿ ಬೇಲೂರು ಮತ್ತು ಕೊಡಗಿನವರೆಗೂ ವಿಸ್ತರಿಸಿತು.

# ಆಡಳಿತದ ಧುರೀಣ

- ವೀರಯೋಧರಾಗಿದ್ದ ಚಿಕ್ಕದೇವರಾಜರು ಆಡಳಿತಪರಿಣಿತರೂ ಆಗಿದ್ದರು. ಆಡಳಿತವನ್ನು ಸುಗಮವಾಗಿ ನಡೆಸಲು ಸಚಿವ ಸಂಪುಟವನ್ನು ನೇಮಿಸಿ, ರಾಜ್ಯಭಾರವನ್ನು ದಕ್ಷತೆಯಿಂದ ನಡೆಸಿದರು.
- ಭೂಮಿ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟ ಕಂದಾಯ ಕಾನೂನುಗಳನ್ನು ಕ್ರೋಢೀಕರಿಸಿದರು.
- ದೇಶಕ್ಕೆಲ್ಲ ಅನ್ವಯವಾಗುವಂತೆ ಅಂಚೆ ವ್ಯವಸ್ಥೆ ರೂಢಿಗೆ ಬಂತು.
- ಸರ್ಕಾರದ ಕೆಲಸ ತ್ವರಿತವಾಗಿ ನಡೆಸುವ ಸಲುವಾಗಿ ಕೇಂದ್ರಾಡಳಿತವನ್ನು 18 ಇಲಾಖೆಗಳನ್ನಾಗಿ ವಿಂಗಡಿಸಲಾಯಿತು.
- ಆಡಳಿತದಲ್ಲಿ ಗ್ರಾಮ ಕಲ್ಯಾಣಕ್ಕೆ ಹೆಚ್ಚಿನ ಗಮನ ಕೊಡುವಂತೆ ಇವರು ಏರ್ಪಾಡು ಮಾಡಿದರು.

# ಆರ್ಥಿಕ ಮಿತವ್ಯಯ, ನವಕೋಟಿ ನಾರಾಯಣ!

- ಅಧಿಕಾರಿಗಳು ತಮಗೆ ಬರುವ ಆದಾಯಕ್ಕಿಂತ ಹೆಚ್ಚಿನ ವೆಚ್ಚ ಮಾಡದಂತೆ ಕಟ್ಟಳೆ ಮಾಡಿದ್ದುದರಿಂದ ಲಂಚಕ್ಕೆ ಆಸ್ಪದವಿಲ್ಲದೆ ಅವರು ನ್ಯಾಯದಿಂದ ವರ್ತಿಸುವುದಕ್ಕೆ ದಾರಿಮಾಡಿಕೊಟ್ಟಿತು.
- ರಾಜ್ಯದ ನಾನಾ ಬಾಬುಗಳಿಂದ ಬರಬೇಕಾದ ಆದಾಯಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿದ್ದರಿಂದ ವಾರ್ಷಿಕ ಆದಾಯ ಇಮ್ಮಡಿಯಾಯಿತು.
- ಅಲ್ಲದೆ ಅದರ ವಿತರಣೆಯಲ್ಲಿ ಒಂದು ಕ್ರಮವನ್ನು ಅನುಸರಿಸಿದ್ದರಿಂದ ರಾಜ್ಯದಲ್ಲಿ ಕ್ಷೇಮ, ಶಾಂತಿ ಮತ್ತು ಪ್ರಗತಿ ಸಾಧಿಸಿದವು.
- ಮಿತವ್ಯಯ ನೀತಿಯಿಂದ, ಸಮರ್ಥ ಆರ್ಥಿಕ ನಿರ್ವಹಣೆಯಿಂದ ಚಿಕ್ಕದೇವರಾಜರು ಅಪಾರ ಧನಸಂಗ್ರಹ ಮಾಡಲು ಸಹಾಯವಾಯಿತು.
- ಅವರು ನವಕೋಟಿ ನಾರಾಯಣ ಎಂಬ ಹೆಸರು ಗಳಿಸಿದರು.

# ಪ್ರಜಾಪ್ರೇಮ

- ಪ್ರಜೆಗಳಿಗೆ ನ್ಯಾಯವಾದ ಬೆಲೆಯಲ್ಲಿ, ನಿರ್ದಿಷ್ಟ ಅಳತೆಯಲ್ಲಿ ಪದಾರ್ಥಗಳು ಸಿಗುವಂತೆ ನಿಯಂತ್ರಿತ ಮಾರುಕಟ್ಟೆಗಳು ಸ್ಥಾಪಿತವಾದವು.
- ತೂಕ ಮತ್ತು ಅಳತೆಗಳನ್ನು ನಿರ್ದಿಷ್ಟಗೊಳಿಸಲಾಯಿತು.
- ವರ್ತಕರ ವ್ಯಾಪಾರ ವಹಿವಾಟುಗಳನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡಿದ್ದರು.
- ರಾಜ್ಯದ ನೀರಾವರಿ ಯೋಜನೆಗಳಲ್ಲಿ ಆಸಕ್ತಿ ವಹಿಸಿ, ಕಾವೇರಿ ನದಿಗೆ ಅಣೆಕಟ್ಟನ್ನು ಕಟ್ಟಿಸಿ, ಹೆಚ್ಚಿನ ಪ್ರದೇಶವನ್ನು ನೀರಾವರಿಗೆ ತರುವ ಪ್ರಯತ್ನ ಮಾಡಿದರು.

# ಧಾರ್ಮಿಕ ಕಾರ್ಯಗಳು

- ಚಿಕ್ಕದೇವರಾಜರು ಶ್ರೀವೈಷ್ಣವ ಧರ್ಮಿಯರಾಗಿದ್ದರೂ ಪರಮತಸಹಿಷ್ಣುವಾಗಿದ್ದರು.
- ರಾಜ್ಯದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದವು.
- ಶ್ರವಣಬೆಳಗೊಳದಲ್ಲಿ ಇವರು ತಟಾಕವನ್ನು ಕಟ್ಟಿಸಿದರು.

# ಸಾಹಿತ್ಯ ಕ್ಷೇತ್ರದ ಕೊಡುಗೆಗಳು

- ಸಾಹಿತ್ಯಪೋಷಕರಾಗಿದ್ದ ಚಿಕ್ಕದೇವರಾಜರ ಕಾಲದಲ್ಲಿ ರಾಜಧಾನಿ ಶ್ರೀರಂಗಪಟ್ಟಣ ಸಾಂಸ್ಕೃತಿಕ ಕೇಂದ್ರವಾಗಿ ಪ್ರಾಮುಖ್ಯತೆ ಗಳಿಸಿತು.
- ಅವರ ಆಸ್ಥಾನದಲ್ಲಿ ತಿರುಮಲಾರ್ಯ, ಮಲ್ಲರಸ ಮುಂತಾದ ವಿದ್ವಾಂಸರೂ, ಶೃಂಗಾರಮ್ಮ, ಹೊನ್ನಮ್ಮ ಎಂಬ ಕವಯಿತ್ರಿಯರೂ ಇದ್ದರು.
- ಇವರ ಆಡಳಿತಾವಧಿಯಾಗಿದ್ದ 17ನೆಯ ಶತಮಾನದ ಉತ್ತರಾರ್ಧವನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಿಕ್ಕದೇವರಾಜಯುಗವೆಂದೇ ಕರೆಯಲಾಗಿದೆ.
- ತಿರುಮಲಾರ್ಯ ಬರೆದ ಗ್ರಂಥಗಳಲ್ಲಿ ಚಿಕ್ಕದೇವರಾಜರೇ ಕಥಾನಾಯಕ. ಅವರ ವಂಶದ ಗೌರವಪ್ರತಿಷ್ಠೆಗಳ ಹಿನ್ನೆಲೆಯಲ್ಲಿ ತನ್ನ ಒಡೆಯನ ಸೌಜನ್ಯವನ್ನು, ಶೌರ್ಯವನ್ನು, ದಿಗ್ವಿಜಯಗಳನ್ನು, ಧರ್ಮಬುದ್ಧಿಯನ್ನು, ಪ್ರಜಾಪರಿಪಾಲನ ನೀತಿಯನ್ನು ಮತ್ತು ವ್ಯಕ್ತಿತ್ವವನ್ನು ವರ್ಣಿಸಿದ್ದಾನೆ.
- ಸ.ಶ.ವ **1673-1704**

# ಗಮನವಿಟ್ಟು ಓದಿಕೊಳ್ಳಿರಿ

- ಸ್ವಹಸ್ತ-ಪರಹಸ್ತಗಳಿಂದ ಸಾಹಿತ್ಯ ಕೈಂಕರ್ಯವನ್ನು ನಡೆಯಿಸಿದರು.
- **ಅವರ ಚಿಕ್ಕದೇವರಾಜ ಭಿನ್ನಪ ಎಂಬ ಕೃತಿ ಶ್ರೀ ವೈಷ್ಣವ ಸಿದ್ಧಾಂತಕ್ಕೆ ಸರಳ ಮತ್ತು ಸುಂದರ ಕೈಪಿಡಿಯಾಗಿದೆ.**
- ಗೀತಗೋಪಾಲ, ಭಾಗವತ, ಶೇಷಧರ್ಮ, ಭಾರತ-ಎಂಬ ಗ್ರಂಥಗಳನ್ನು ರಚಿಸಿದನೆಂದು ತಿಳಿದುಬಂದಿದೆ. ಗೀತಗೋಪಾಲದಲ್ಲಿ ತಿರುಮಲಾರ್ಯನೆಂಬ ಆಸ್ಥಾನಕವಿಯಿಂದ ರಚಿತವಾದ ಕೆಲವು ಪದ್ಯಗಳೂ ಸೇರಿವೆಯಾದ್ದರಿಂದ ಅದನ್ನು ಅರಸನೇ ಬರೆದನೆ, ಎಂಬ ವಿಷಯದಲ್ಲಿ ಜಿಜ್ಞಾಸೆ ಮೂಡಿದೆ.
- **ಚಿಕ್ಕದೇವರಾಜರು ಆಡಳಿತವನ್ನು ವಿಚಕ್ಷಣೆಯಿಂದ ನಡೆಸಿ, ಕನ್ನಡ ರಾಜ್ಯವನ್ನು ವ್ಯಾಪಕವಾಗಿ ಕಟ್ಟಿ, ಅದರ ಪ್ರತಿಷ್ಠೆಗೌರವಗಳನ್ನು ಹೆಚ್ಚಿಸಿ, 1704ರಲ್ಲಿ ನಿಧನರಾದರು.**

# ಹಿರಿಮೆ

- ಮೈಸೂರಿನಲ್ಲಿ ಸಾರ್ವಭೌಮತ್ವವನ್ನು ಸ್ಥಿರವಾಗಿ ಸ್ಥಾಪಿಸಿ, ದಕ್ಷಿಣ ಭಾರತದಲ್ಲಿ ಅಪ್ರತಿಮ ವೀರರೆನಿಸಿಕೊಂಡರು.
- ವ್ಯವಹಾರಚತುರರಾದ ಚಿಕ್ಕದೇವರಾಜರು ಭಾರತದ ರಾಜಕೀಯವನ್ನು ಕೂಲಂಕಷವಾಗಿ ಅಭ್ಯಸಿಸಿ, ಸುತ್ತಮುತ್ತಲಿನ ಪರಿಸ್ಥಿತಿಯನ್ನು ಸದುಪಯೋಗಪಡಿಸಿಕೊಂಡು, ರಾಜ್ಯದ ಅಭ್ಯುದಯಕ್ಕೆ ಕಾರಣಕರ್ತರಾದರು.
- ಕಾಲೋಚಿತವಾದ ಉದಾತ್ತ ರಾಜಕೀಯ ಧೋರಣೆಯನ್ನು ತಳೆದ ಚಿಕ್ಕದೇವರಾಜರು ಕರ್ಣಾಟಕದ ಸ್ವತಂತ್ರ ರಾಜರಲ್ಲಿ ಅಗ್ರಗಣ್ಯರೆನಿಸಿದ್ದಾರೆ.
- ಸಾಹಿತ್ಯ, ಸಂಗೀತ, ಸಮರಾಂಗಣಗಳಲ್ಲಿ ಈ ದೊರೆಗೆ ಸಮಾನವಾದ ಪ್ರಭುತ್ವ ಸಿದ್ಧಿಸಿತ್ತು.
- ಮೈಸೂರು ರಾಜ್ಯದ ರಾಜಕೀಯ ಪ್ರಗತಿಗೆ ರಾಜ ಒಡೆಯರ್ ಹಾಗೂ ಕಂಠೀರವ ನರಸರಾಜರು ಸಾಕಷ್ಟು ಶ್ರಮಪಟ್ಟಿದ್ದು ನಿಜವಾದರೂ, ಅದನ್ನು ಇಮ್ಮಡಿಗೊಳಿಸಿದ ಕೀರ್ತಿ ಚಿಕ್ಕದೇವರಾಜರಿಗೆ ಸಲ್ಲುತ್ತದೆ.